## ಬಂದ ಮೇಲೆ ಓದು

ನಾನು ಅವತ್ತು ಸಂಜೆ ಮನೆಗೆ ಬಂದಾಗ ಎಂಟು ವರ್ಷದ ಮೊಮ್ಮಗಳು ಸುಖಿ ಏನನ್ನೋ ಬರೆಯುತ್ತ ಕೂತಿದ್ದಳು. 'ಏನು ಬರೆಯುತ್ತಿರೋದು ಬಂಗಾರು?' ಎಂದು ಕೇಳಿದೆ. 'ಲೆಟರ್ ಬರೀತಾ ಇದ್ದೀನಿ, ತಾತ' ಎಂದಳು ಮುದ್ದಾಗಿ. 'ಯಾರಿಗೆ?' ಅಂತ ಕೇಳಿದೆ. 'ನಿಮಗೆ ತಾತ' ಎಂದಳು. 'ಹಾಗಾದರೆ ಕೊಡು ನೋಡೋಣ' ಎಂದೆ ಖುಷಿಯಿಂದ. ಅವಳು, 'ಪೋಸ್ಟ್ ಮಾಡ್ತೀನಿ, ಬಂದಮೇಲೆ ಓದಿ ತಾತ' ಅನ್ನಬೇಕೇ!

**ಶಂಕರೇಗೌಡ ತುಂಬಕೆರೆ**





## ಸೋಂಕು ಬೇಕು

ಗಿಡಕ್ಕೆ ನೀರು ಬಿಡುತ್ತಿದ್ದೆ. ನಮಗೆ ತಿಂಗಳ ಕಿರಾಣಿ ತಂದು ಹಾಕುವ ಅಂಗಡಿಯಾತ ಫೋನಾಯಿಸಿದ. ಏನೆಂದು ಕೇಳಿದೆ. ನಿಮ್ಮ ಕೆಲಸದಾತ, 'ಸೋಂಕು ಬೇಕು, ಸೋಂಕು ಬೇಕು ಎಂದು ಕೇಳುತ್ತಿದ್ದಾನೆ. ಏನೆಂದು ತಿಳಿಯಲಿಲ್ಲ' ಅಂದ. ಅಂಗಡಿಗೆ ಹೋಗುವ ಮುಂಚೆ ನಾವೆಲ್ಲಾ ಮನೆಯಲ್ಲಿ ಟೀವಿ ನೋಡುತ್ತಿದ್ದೆವು. ಕೊರೊನಾ ಸೋಂಕಿಗೆ ಸಂಬಂಧಿಸಿದ ಸುದ್ದಿಯೇ ಬರುತ್ತಿತ್ತು. ಆತನೂ ಆ ಸುದ್ದಿ ನೋಡುತ್ತಿದ್ದ. ಅಂಗಡಿಯಿಂದ 'ಸೋಂಪು' (ಬಡೆಸೋಪು) ತರಲು ಕಳಿಸಿದೆವು. ಅದೇ ಧ್ಯಾನದಲ್ಲಿ ಅಂಗಡಿಗೆ ಹೋದ ಆತನ ಬಾಯಿಗೆ ಸೋಂಪಿನ ಬದಲು ಸೋಂಕು ಬಂದಿದೆ.

**ಪೂರ್ಣಿಮಾ ಭಂಡಾರ್ಕರ್**